ಪುಟ–2

ಕ್ರಾಂತಿಯತಿದಿ

ಕಾಯಕಯೋಗಿ

KAYAKAYOGI-MORNING DAILY

ಕನ್ನಡ ದಿನಪತ್ರಿಕೆ

ಮಂಗಳವಾರ
10 ಆಗಸ್ಟ್ 2021

## 40ನೇ ದಿನಕ್ಕೆ ಕಾಲಿರಿಸಿದ ಎನ್.ಟಿ.ಎಂ ಶಾಲೆ ಉಳಿಸಿ ಹೋರಾಟ

ಮೈಸೂರು : ಮಹಾರಾಣಿ ಮಾದರಿ (ಎನ್.ಟಿ.ಎಂ) ಶಾಲೆ ಉಳಿಸಿ ಹೋರಾಟ ಒಕ್ಕೂಟ ಸಮಿತಿ ನಡೆಸುತ್ತಿರುವ ಪ್ರತಿಭಟನೆ 40ನೇ ದಿನಕ್ಕೆ ಕಾಲಿರಿಸಿದೆ.

ಶಾಲೆಯನ್ನೂ ಉಳಿಸಿ ಸ್ಮಾರಕವನ್ನೂ ನಿರ್ಮಿಸಿ ಎಂಬ ಒಕ್ಕೂಟದ ಘೋಷಣೆಯೊಂದಿಗೆ ಪ್ರತಿಭಟನೆ ನಡೆಸಲಾಗಿದ್ದು, ನಗರದ ಎನ್.ಟಿ.ಎಂ ಶಾಲೆಯ ಮುಂಭಾಗ ಒಕ್ಕೂಟದೊಂದಿಗೆ ಜಿಲ್ಲಾಧಿಕಾರಿಯ ವರದಿ ಜಾರಿಗೆ ಸರ್ಕಾರವನ್ನು ಒತ್ತಾಯಿಸಿ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಒಕ್ಕೂಟದ ಪ್ರಧಾನ ಸಂಚಾಲಕ ಪಿ.ಮಲ್ಲೇಶ್, ಒಕ್ಕೂಟದ ಸಂಪರ್ಕ ಸಂಚಾಲಕ ಸ.ರ ಸುದರ್ಶನ, ಅರವಿಂದ್ ಶರ್ಮ, ಮಾಜಿ ಮೇಯರ್ ಪುರುಷೋತ್ತಮ್, ಕೊ.ಸು ನರಸಿಂಹಮೂರ್ತಿ, ಜನ್ನಿ ಜನಾರ್ಧನ್, ಮೂಗೂರು ನಂಜುಂಡಸ್ವಾಮಿ, ತಾಯೂರು ವಿಟ್ಟಲ್ ಮೂರ್ತಿ, ಮಿನಿ ಬಂಗಾರಪ್ಪ, ಹೊಸಕೋಟೆ ಬಸವರಾಜು, ಮೋಹನ್ ಕುಮಾರ್ ಗೌಡ, ಯಮುನಾ, ಸುರೇಶ್ ಬಾಬು, ಹೆಚ್ .ಎನಂಜುಂಡಸ್ವಾಮಿ, ಚಂದ್ರಶೇಖರ್ ಮೇಟಿ, ಬೆಳ್ಳಾಳೆ ಬೆಟ್ಟ೿ಗೌಡ, ಭಾನುಮೋಹನ್, ಬಸವರಾಜು, ವಾಸುದೇವ, ಉಗ್ರನರಸಿಂಹೇಗೌಡ, ದೇವೆಂದ್ರ, ಬೆಮೆಲ್ ಸಿದ್ದಲಿಂಗಪ್ಪ, ಬಸವರಾಜು, ಸುರೇಶ್ ಬಾಬು ಫಾರ್ಮಸಿಸ್ಟ್, ಜಿ.ಪ್ರಕಾಶ್, ಎಲ್.ಐ.ಸಿ ಸಿದ್ದಪ್ಪ, ಮಧುಮತಿ, ಎ.ಐ.ಯು.ಟಿ.ಯು.ಸಿ ಯಶೋಧರ, ಮುದ್ದುಕೃಷ್ಣ, ಬೊಕ್ಕಳ್ಳಿ ನಂಜುಂಡಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

### ಕಾವ್ಯ ಯೋಗಿ

## ಕಾಣದ ಮನವೆಂಬ ಭಾವ ಶರಧಿ...

ಎಲ್ಲವ ಆಡಗಿಸಿಕೊಂಡ ಮನ ಕಾಣದಾಗಿದೆ
ನೋವ ನುಂಗಿದ ಮನ ಮೌನದಿ
ನಗುವ ಮುಖದಿ ತೋರಿ ಹುಸಿನಗೆ ಬೀರಿದೆ
ಅನಿವಾರ್ಯದ ಒಳಸುಳಿಗೆ ನಗೆಯ ಮುಖವಾಡ
ಮನದ ಬೇಗುದಿಗೆ ಸದ್ದಿರದ ವಿರಾಮ!

ಕಾಣದ ಮನ ಭಾವನೆಗಳ ವಿಸ್ಮಯ ಸಂಚಿಕೆ
ಹೇಗೆ ಬಚ್ಚಿಟ್ಟುಕೊಂಡಿಹುದೋ ತೋರಗೊಡದೆ!
ಭಾವ ಶರಧಿಯೊಳಗೆ ಅಬ್ಬಾ!ಹೆದ್ದೆರೆಗಳು
ಪ್ರೀತಿ ಪ್ರೇಮ ಮೋಹ ವಿರಹಗಳ ಭೋಗರಸೆತಗಳು

ತನ್ನೊಳಗೆ ಆಡಗಿಸಿಕೊಂಡು ಅಸೀಮ ಶಕ್ತಿ!
ಮನುಜನ ತನ್ನಿಚ್ಛೆಯಂತೆ ಅಳಿಸಿ ನಗಿಸಿ ಕುಣಿಸಿ
ಅಂಕುಶಕ್ಕೆ ಸಿಗದೆ ಹಾರಿದೆ ಕಾಡಿಸಿ
ಸಿಗದ ಮರೀಚಿಕೆಯ ಬಿಡದೆ ಹಿಂಬಾಲಿಸಿ

ಮರದಿಂದ ಮರಕೆ ಹಾರುವ ಮರ್ಕಟದ ತೆರದಿ
ಭಾವ ಬದಲು ಕಾಲಚಕ್ರದ ತಿರುಗಿನಲ್ಲಿ
ಮನದ ಸವನೆನಪುಗಳು ಕ್ಷಣಭಂಗುರವಾಗಿ
ಮನ ತೂಗುಯ್ಯಾಲೆ ಬದುಕ ಸಂದಿಗ್ಧಗಳಲಿ

ಭಾವನೆಗಳ ತಾಕಲಾಟ ಅಂತರ್ಯದಿ ಮೇಳೈಸಿ
ಕಾಣದ ಮನದ ತೋಟದೊಳಗೆ ನೂರಾರು
ಭಾವಪುಷ್ಪಗಳು ಬಿರಿದು ವಿಕಸಿತವಾಗಿ
ಅರಳಿ ನಲುಗಿ ಮಣ್ಣಾಗಿ ಮಾಯವಾಗಿ...

– ಎಸ್. ಎಲ್. ವರಲಕ್ಷ್ಮೀಮಂಜುನಾಥ್
ಪಂಪಪ್ರಶಸ್ತಿ ಪುರಸ್ಕೃತರು, ಮೈಸೂರು

# ರೈತ, ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಸರ್ಕಾರಗಳ ವಿರುದ್ಧ ಆಕ್ರೋಶ

ಕೃಷ್ಣರಾಜಪೇಟೆ: ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹಾಗೂ ರೈತ, ಕಾರ್ಮಿಕ ವಿರೋಧಿ ನೀತಿ ಖಂಡಿಸಿ ತಾಲೂಕಿನ ಪ್ರಾಂತ ಕೃಷಿಕೂಲಿ ಕಾರ್ಮಿಕರ ಸಂಘದ ಪದಾಧಿಕಾರಿಗಳು, ಮಹಿಳೆಯರು ಹಾಗೂ ರಾಜ್ಯ ರೈತ ಸಂಘದ ಕಾರ್ಯಕರ್ತರು ಪಟ್ಟಣದ ಮಿನಿ ವಿಧಾನಸೌಧಕ್ಕೆ ಮುತ್ತಿಗೆಹಾಕಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತವಿರೋಧಿ ನೀತಿಯನ್ನು ಖಂಡಿಸಿ ಮಿನಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ ಕೃಷಿ ಕೂಲಿಕಾರ್ಮಿಕರು ಹಾಗೂ ರೈತಮುಖಂಡರು ದುಡಿಯುವ ವರ್ಗಗಳ ಜನರಿಗೆ ಕೈತುಂಬಾ ಕೂಲಿಯನ್ನು ನೀಡಲು ವಿಫಲವಾಗಿರುವ ಕೇಂದ್ರ–ರಾಜ್ಯ ಸರ್ಕಾರಗಳು ರೈತವಿರೋಧಿ ಸರ್ಕಾರಗಳಾಗಿವೆ. ರೈತರ ಜೀವನಕ್ಕೆ ಮಾರಕ ವಾಗಿರುವ ಕೃಷಿ ಕಾಯ್ದೆಗಳನ್ನು ಸಿದ್ಧಪಡಿಸಿ ರೈತರ ವಿರೋಧದ ನಡುವೆಯೇ ರೈತರ ಬದುಕಿಗೆ ಮರಣ ಶಾಸನವಾಗಿರುವ ಕೃಷಿ ತಿದ್ದುಪಡಿ ಕಾಯ್ದೆಗಳ ಜಾರಿಯನ್ನು ಸರ್ಕಾರವು ಕೈಬಿಡಬೇಕು. ಉದ್ಯೋಗ ಖಾತ್ರಿ ನರೇಗಾ ಯೋಜನೆಯ ಅಡಿಯಲ್ಲಿ ದುಡಿಯುವ ವರ್ಗಗಳ ಜನರು ಹಾಗೂ ಕೂಲಿ ಕಾರ್ಮಿಕರಿಗೆ ಜಾಬ್‌ಕಾರ್ಡ್‌ಗಳ ಮೂಲಕ ಕೆಲಸವನ್ನು ನೀಡಬೇಕು, ಕೋವಿಡ್ ಸೋಂಕಿನಿಂದ ಮೃತರಾದ ಬಡ ಕುಟುಂಬಗಳಿಗೆ ಕನಿಷ್ಠ 5ಲಕ್ಷರೂ ಪರಿಹಾರ ನೀಡಬೇಕು. ಸರ್ಕಾರವು ನೀಡುತ್ತಿರುವ ಸೌಲಭ್ಯಗಳು ಶ್ರೀಸಾಮಾನ್ಯರಿಗೆ ತಲುಪುವಂತೆ ನೋಡಿಕೊಂಡು ಮಧ್ಯವರ್ತಿಗಳು ಹಾಗೂ ದಳ್ಳಾಳಿಗಳ ಹಾವಳಿಯನ್ನು ತಪ್ಪಿಸಬೇಕು ಎಂದು ಆಗ್ರಹಿಸಿದ ಪ್ರಾಂತ ಕೃಷಿಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷ ಗಂಗೇನಹಳ್ಳಿ ಗಿರೀಶ್, ಕಾರ್ಯದರ್ಶಿ ಆನಂದ್, ಕರ್ನಾಟಕ ರಾಜ್ಯ ರೈತಸಂಘದ ತಾಲೂಕು ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ, ಪ್ರಧಾನ ಕಾರ್ಯದರ್ಶಿ ಬೂಕನಕೆರೆ ನಾಗರಾಜು, ಜಿಲ್ಲಾ ಉಪಾಧ್ಯಕ್ಷ ಮರುವನಹಳ್ಳಿ ಶಂಕರ ಒತ್ತಾಯಿಸಿ ತಹಶೀಲ್ದಾರರ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಉಪತಹಶೀಲ್ದಾರ್ ಪಿರಿಯಣ್ಣ ಅವರು ಪ್ರತಿಭಟನಾಕಾರರಿಂದ ಮನವಿಯನ್ನು ಸ್ವೀಕರಿಸಿ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ತಲುಪಿಸಿ ರೈತರ ನೋವಿಗೆ ಧನಿಯಾಗುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದಾಗಿ ತಿಳಿಸಿದರು.

ಕೃಷ್ಣರಾಜಪೇಟೆ ತಾಲೂಕಿನ ಪ್ರಾಂತ ಕೃಷಿಕೂಲಿ ಕಾರ್ಮಿಕರ ಸಂಘದ ಪದಾಧಿಕಾರಿಗಳು, ಮಹಿಳೆಯರು ಹಾಗೂ ರಾಜ್ಯ ರೈತ ಸಂಘದ ಕಾರ್ಯಕರ್ತರು ಪಟ್ಟಣದ ಮಿನಿ ವಿಧಾನಸೌಧಕ್ಕೆ ಮುತ್ತಿಗೆಹಾಕಿ ಪ್ರತಿಭಟನೆ ನಡೆಸಿ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಿ ಆಕ್ರೋಶ ವ್ಯಕ್ತಪಡಿಸಿದರು.

## ಕೃಷಿ ಮಸೂದೆ ತಿದ್ದುಪಡಿ ಹಿಂಪಡೆಯುವಂತೆ ಒತ್ತಾಯಿಸಿ ಪ್ರತಿಭಟನೆ

ಬೆಳಕವಾಡಿ : ರೈತ, ಕಾರ್ಮಿಕ, ಕೂಲಿಗಾರ, ಮಹಿಳಾ, ಯುವಜನ ವಿರೋಧಿ ಕಾರ್ಪೋರೇಟ್ ಲೂಟಿಯನ್ನು ವಿರೋಧಿಸಿ, ರೈತವಿರೋಧಿ ಕೃಷಿ ಮಸೂದೆ ತಿದ್ದುಪಡಿಗಳನ್ನು ಕೈಬಿಡಲು ಆಗ್ರಹಿಸಿ ವಿವಿಧ ಸಂಘಟನೆಗಳು ಬೆಳಕವಾಡಿ ಗ್ರಾಮದಲ್ಲಿ ಸೋಮವಾರ ಪ್ರತಿಭಟನೆಯನ್ನು ನಡೆಸಿದರು.

ಬಿ.ಜಿ.ಪುರ ಹೋಬಳಿಯ ಬೆಳಕವಾಡಿ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ಕರ್ನಾಟಕ ಪ್ರಾಂತರೈತಸಂಘ,ಅಖಿಲಭಾರತಜನವಾದಿಮಹಿಳಾಸಂಘಟನೆ, ಕರ್ನಾಟಕ ಪ್ರಾಂತ ಕೃಷಿಕೂಲಿಗಾರರ ಸಂಘ, ಸೆಂಟ್ರಲ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಭಾರತ ಪ್ರಜಾಸತ್ಾತಕ ಯುವಜನ ಫೆಡರೇಷನ್, ದಲಿತಹಕ್ಕುಗಳಸಮಿತಿ ಸಂಘಟನೆಗಳ ಸದಸ್ಯರು ರೈತವಿರೋಧಿ ಕೃಷಿ ಮಸೂದೇ ತಿದ್ದುಪಡಿಗಳನ್ನು ಕೈಬಿಡಲು ಆಗ್ರಹಿಸಿ ಪ್ರತಿಭಟನೆ ನಡೆಸಿದರು. ನಂತರ ಕರ್ನಾಟಕ ಪ್ರಾಂತ ರೈತಸಂಘದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಎನ್.ಲಿಂಗರಾಜುಮೂರ್ತಿ ಮಾತನಾಡಿ, ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಸಂಹಿತೆಗಳು ಹಾಗೂ ಜನವಿರೋಧಿ ಕೃಷಿ ಕಾನೂನುಗಳು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆಯನ್ನು ರದ್ದುಗೊಳಿಸಬೇಕು. ರಾಜ್ಯದ ಭೂಸುಧಾರಣಾ ಕಾಯ್ದೆ, ಎಪಿಎಂಸಿ, ಕಾಯ್ದೆ, ಜಾನುವಾರು ಹತ್ಯಾ ಕಾಯ್ದೆಗಳ ಜನವಿರೋಧಿ ತಿದ್ದುಪಡಿಯನ್ನು ರಾಜ್ಯಸರ್ಕಾರ ವಾಪಸ್ಸು ಪಡೆಯಬೇಕು. ಎಂಟ ಹತ್ತು ಅಂಶಗಳನ್ನು ಒಳಗೊಂಡ ಮನವಿಪತ್ರವನ್ನು ಉಪ–ತಹಶೀಲ್ದಾರ್ ರುಕ್ಮಬಾಯಿ ರವರಿಗೆ ಸಲ್ಲಿಸಿದರು.

ಇದೇವೇಳೆ ಡಿ.ವೈ.ಎಫ್.ಐ.ನ ತಾಲ್ಲೂಕುಸಂಚಾಲಕ ಗುರುಸ್ವಾಮಿ, ಮುಖಂಡ ಹೊಸಹಳ್ಳಿಚಂದ್ರು, ಕೂಲಿಗಾರಸಂಘದ ಜಿಲ್ಲಾಉಪಾಧ್ಯಕ್ಷ ಬಿ.ವಿ.ಬಸವಣ್ಣ, ನಿವೃತ್ತಹೊಫೆಸರ್ ರಂಗಸ್ವಾಮಿ, ಕರ್ನಾಟಕಪ್ರಾಂತ ರೈತಸಂಘದ ಹೊಸಹಳ್ಳಿ ಘಟಕದ ಕಾರ್ಯದರ್ಶಿ ಎಂ.ಶಿವ ರಾಮು, ಸದಸ್ಯರಾದ ಕಿರಗಸೂರುಸಿದ್ದರಾಜು, ದ್ವನ, ರಘುಸ್ವಾಮಿ, ಶಿವಮರಿ ಹೆಚ್.ಡಿ. ಪ್ರದೀಪಕುಮಾರ್, ಜವನಗಹಳ್ಳಿರವಿ, ಆನಂದಸ್ವಾಮಿ, ಸೇರಿದಂತೆ ಇತರರು ಹಾಜರಿದ್ದರು.

ರೈತವಿರೋಧಿ ಕೃಷಿ ಮಸೂದೆಗಳನ್ನು ಕೈಬಿಡಲು ಆಗ್ರಹಿಸಿ ವಿವಿಧ ಸಂಘಟನೆಯವರು ಬೆಳಕವಾಡಿ ಗ್ರಾಮದಲ್ಲಿ ಪ್ರತಿಭಟನೆ ನಡೆಸುತ್ತಿರುವುದನ್ನು ಕಾಣಬಹುದು.

## ಜಾತಿ ಕಾರಣ ನೆಪ: ನೇಣಿಗೆ ಶರಣಾದ ಬೇಸತ್ತ ಪ್ರೇಮಿಗಳು

ಮಂಡ್ಯ : ಪ್ರೇಮಿಗಳಿಬ್ಬರು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹಂಪಾಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಜೋಳಯ್ಯನ ಮಗಳಾದ ಧನಲಕ್ಷ್ಮಿ (15) ಹಾಗೂ ನಾಗೇಶ್ ಮಗ ಶ್ರೀನಿವಾಸ (20) ಎಂಬುವರೇ ನೇಣಿಗೆ ಕೊರಳೊಡ್ಡಿದ ಭಗ್ನಪ್ರೇಮಿಗಳು.

ಕಳೆದ ಒಂದು ವರ್ಷದಿಂದ ಧನಲಕ್ಷ್ಮಿ ಹಾಗೂ ಶ್ರೀನಿವಾಸ್ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ದಲಿತ ಸಮುದಾಯದ ಧನಲಕ್ಷ್ಮಿ ಹಾಗೂ ಗಂಗಾಮತ ಸಮುದಾಯದ ಶ್ರೀನಿವಾಸ ಇಬ್ಬರ ಮದುವೆಗೆ ಮನೆಯವರ ಸಹಮತವಿರಲಿಲ್ಲ ಎನ್ನಲಾಗಿದೆ. ಜೊತೆಗೆ ಧನಲಕ್ಷ್ಮಿ ಅಪ್ರಾಪ್ತಳಾಗಿದ್ದ ಕಾರಣ ಅಲ್ಲದೆ, ಬೇರೆ ಬೇರೆ ಜಾತಿಯವರಾಗಿದ್ದರಿಂದ ಗ್ರಾಮದಲ್ಲಿ ಯಾರೂ ಒಪ್ಪುವುದಿಲ್ಲ. ಒಟ್ಟಿಗೆ ಬದಕಲಾಗದು ಎಂದು ನಿರ್ಧರಿಸಿ ಇಬ್ಬರೂ ಹಂಪಾಪುರ ತಿರುಪಿನಲ್ಲಿರುವ ಸಿದ್ದಪ್ಪಾಜಿ ದೇವಸ್ಥಾನದ ಸಮೀಪದ ಅರಣ್ಯದಲ್ಲಿರುವ ಮರಕ್ಕೆ ಧನಲಕ್ಷಿಯ ವೇಲ್‌ನಿಂದಲೇ ಒಂದೊಂದು ತುದಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಸಿಪಿಐ ಕ್ಯಾತೇಗೌಡ, ಪಿಎಸ್‌ಐ ಭೀಮಪ್ಪ ಸಿದ್ದಪ್ಪ ಬಾಣಸಿ ಇತರೆ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಕೆರಗೋಡು ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

### ಶಾಸಕ ರಾಮದಾಸ್ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ಕೋರ್ಟ್ ಸೂಚನೆ

ಬೆಂಗಳೂರು : ಮೈಸೂರಿನ ಮಳಲವಾಡಿ ಭೂ ಹಗರಣ ಸಂಬಂಧ ಶಾಸಕ ಎಸ್.ಎ.ರಾಮದಾಸ್ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಸರಕಾರಕ್ಕೆ ಸೂಚನೆ ನೀಡಿದೆ. ಇದರಿಂದ ಶಾಸಕ ರಾಮದಾಸ್‌ಗೆ ಕಷ್ಟ ಎದುರಾಗಿದೆ.

ಮಳಲವಾಡಿ ಭೂ ಹಗರಣಕ್ಕೆ ಸಂಬಂಧಿಸಿದಂತೆ 2008ರಲ್ಲಿ ಎಸ್.ಎ.ರಾಮದಾಸ್ ವಿರುದ್ಧ ಮೈಸೂರಿನ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪೊಲೀಸರು ಪ್ರಕರಣ ಸಂಬಂಧ ಬಿ–ರಿಪೋರ್ಟ್ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಈ ವರದಿಯನ್ನು ಕೆಳ ನ್ಯಾಯಾಲಯ ಅಂಗೀಕರಿಸಿತ್ತು. ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಕೆಳ ಹಂತದ ನ್ಯಾಯಾಲಯದ ಕ್ರಮ ಪ್ರಶ್ನಿಸಿ, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದಲ್ಲಿ ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದರು.

ಶಾಸಕರಾಗಿ ರಾಮದಾಸ್ ಆಯ್ಕೆಯಾಗಿದ್ದರಿಂದಾಗಿ ಪ್ರಕರಣ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿತು. ಪ್ರಕರಣದ ವಿಚಾರಣೆ ನಡೆಸಿದ್ದ ಜನಪ್ರತಿನಿಧಿಗಳ ನ್ಯಾಯಾಲಯ 2019ರಲ್ಲೇ ರಾಮದಾಸ್ ವಿರುದ್ಧ ಕ್ರಿಮಿನಲ್ ಕೇಸ್, ದಾಖಲಿಸುವಂತೆ ಆದೇಶಿಸಿತ್ತು.

ಈ ಆದೇಶಕ್ಕೆ ಶಾಸಕ ರಾಮದಾಸ್ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು. ತಡೆಯಾಜ್ಞೆಯನ್ನು ಹೈಕೋರ್ಟ್ ಇತ್ತೀಚೆಗೆ ತೆರವು ಮಾಡಿತ್ತು. ಮತ್ತೆ ವಿಚಾರಣೆ ಕೈಗೆತ್ತಿಕೊಂಡ ಜನಪ್ರತಿನಿಧಿಗಳ ನ್ಯಾಯಾಲಯ ಇದೀಗ ರಾಮದಾಸ್ ವಿರುದ್ಧ ಸೆಕ್ಷನ್ 420, 468 ಅಡಿಯಲ್ಲಿ ಕೇಸ್ ದಾಖಲಿಸುವಂತೆ ಸೂಚಿಸಿದೆ. ಈ ಮೂಲಕ ರಾಮದಾಸ್‌ಗೆ ಸಂಕಷ್ಟ ಎದುರಾಗಿದೆ. 1994ರಲ್ಲಿ ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದ ವಿಜಯಭಾಸ್ಕರ್, ಮಳಲವಾಡಿ ಭೂ ಹಗರಣ ಸಂಬಂಧ ರಾಮದಾಸ್ ವಿರುದ್ಧ ತನಿಖಾ ವರದಿ ಸಲ್ಲಿಸಿದ್ದರು.

## ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಭಾಸ್ಕರ್ ವರ್ಗಾವಣೆ: ಸನ್ಮಾನ

ಚಾಮರಾಜನಗರ: ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪ ವಿಭಾಗ ಚಾಮರಾಜನಗರದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಎ.ಎಸ್. ಭಾಸ್ಕರ್ ಅವರನ್ನು ಸರ್ಕಾರ ವರ್ಗಾವಣೆ ಮಾಡಿದೆ. ಈ ಹಿನ್ನೆಲೆಯಲ್ಲಿ ಉಪವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉತ್ತಮವಾಗಿ ಸೇವೆ ಸಲ್ಲಿಸಿದ ಭಾಸ್ಕರ್ ಅವರಿಗೆ ಬೀಳ್ಕೊಟ್ಟು ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಭಾಸ್ಕರ್ ಅವರು ಕಳೆದ 2 ವರ್ಷಗಳಿಂದ ಚಾಮರಾಜನಗರ ಉಪವಿಭಾಗದಲ್ಲಿ ಕೆಲಸ ಮಾಡಲು ಸಹಕರಿಸಿದ ಎಲ್ಲಾ ಸಿಬ್ಬಂದಿಗಳು ಹಾಗೂ ಅಧಿಕಾರಿಗಳಿಗೆ ಧನ್ಯವಾದ ತಿಳಿಸಿ, ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಜನಸಾಮಾನ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುವುದು ಸರ್ಕಾರಿ ಅಧಿಕಾರಿಗಳ ಕರ್ತವ್ಯವಾಗಿದೆ. ಚಾಮರಾಜನಗರ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸಲು ಪ್ರತಿಯೊಬ್ಬರು ಸಹಕರಿಸಿದ್ದು ಇಲ್ಲಿನ ಜನರ ಪ್ರೀತಿ, ವಿಶ್ವಾಸಕ್ಕೆ ಅಭಾರಿಯಾಗಿದ್ದಾನೆಂದು ಭಾವುಕರಾದರು.

ಈ ಸಂದರ್ಭದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪ ವಿಭಾಗ ಚಾಮರಾಜನಗರದ ನೂತನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಆರ್.ಶ್ಯಾಮಸುಂದರ್, ಸಹಾಯಕ ಇಂಜಿನಿಯರ್ ಗಳಾದ ರಾಜಶೇಖರ್, ಪ್ರತೀಕ್, ಯಶವಂತಗೌಡ,ಶಾಖಾಧಿಕಾರಿಗಳಾದ ಸೋಮಣ್ಣ, ಮಂಜುಳ,ವ್ಯವಸ್ಥಾಪಕ ಮಹೇಂದ್ರ, ಮಾರಿಮುತ್ತು ಸೇರಿದಂತೆ ಕಚೇರಿ ಸಿಬ್ಬಂದಿಗಳು ಇದ್ದರು.

## ಧರೆಗೆದೊಡ್ಡವರ ಮಠದ 'ಆಸ್ತಿ' ವಿವಾದ

ಪೀಠದ ಆದಾಯ ಹಂಚಿಕೆಗೆ ಜಟಾಪಟಿ : ತಡೆಬೆಡೆಯಲು ಪ್ರತ್ಯೇಕ ಶೆಡ್ ನಿರ್ಮಾಣ : ಪೊಲೀಸರ ಮದ್ಯಸ್ಥಿಕೆ : ಮಠದ ಬಾಗಿಲು ಬಂದ್

ಬೆಳಕವಾಡಿ : ಅಸಂಖ್ಯಾತ ನೀಲಗಾರ ಭಕ್ತ ಸಮೂಹದ ಆರಾಧ್ಯದೈವ ಪರಂಜ್ಯೋತಿ ಪವಾಡಪುರುಥ ಶ್ರೀಮಂಟೇಸ್ವಾಮಿ ಏಕ್ಕ ಕ್ಷೇತ್ರ ಮಳವಳ್ಳಿ ತಾಲ್ಲೂಕು ಬಿಜಿಪುರ ಹೋಬಳಿಯ ಬೊಪ್ಪೆಗೌಡನಪುರದ ಧರೆಗೆ ದೊಡ್ಡವರ ಸಂಸ್ಥಾನಮಠದಲ್ಲಿ ಭಾನುವಾರ ಬೆಳಗ್ಗೆ ಭೀಮಸಅಮಾವಾಸ್ಯೆ ಪೂಜಾ ಕೈಂಕರ್ಯ ವೇಳೆ ಪೀಠಾಧಿಪತಿ ಕುಟುಂಬದ ಸದಸ್ಯರ ನಡುವೆ ಮಠದ ಆದಾಯದ ವಿಚಾರದಲ್ಲಿ ಜಟಾಪಟಿನಡೆದಿದೆ.

ಮಠಾಧಿಪತಿ ಶ್ರೀಜ್ಞಾನನಂದಚನ್ನರಾಜೇ ಅರಸ್ ಹಾಗೂ ಇವರ ಚಿಕ್ಕಪ್ಪನವರಾದ ಕೊಳ್ಳೇಗಾಲ ತಾಲೂಕಿನ ಚಿಕ್ಕಲೂರು ಶ್ರೀಕ್ಷೇತ್ರದ ಆಡಳಿತಾಧಿಕಾರಿ ದಿ.ಪ್ರಭುದೇವ ರಾಜೇ ಅರಸ್ ಅವರಪುತ್ರ ಭರತ್ ರಾಜೇ ಅರಸ್ ನಡುವೆವಾಗ್ವಾದನಡೆದಿದೆಎಂದು ಹೇಳಲಾಗಿದೆ.

ಧರೆಗೆ ದೊಡ್ಡವರ ಸಂಸ್